

# ವಿಜಯವಾಣಿ

ಡಾ. ವಿಜಯ ಸಂಕೇಶ್ವರ ಸಾರಥ್ಯದಲ್ಲಿ

ಕನ್ನಡಿಗರ ಧ್ವನಿ

ಹುಬ್ಬಳ್ಳಿ ವಿಜಾಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಗುಲ್ಬರ್ಗ ಬೆಳಗಾವಿ ● ಸಂಪುಟ 2 ● ಸಂಚಿಕೆ 34 VIJAYAVANI ● BELGAUM

## ಬೆಳಗಾವಿಯ ಕೈಗಾರಿಕೆಗಳಿಗೆ ಪೊಲೀಸ್ ಇಲಾಖೆಯಿಂದ ಎಲ್ಲ ಸಹಕಾರ

■ ವಾಣಿಜ್ಯೋದ್ಯಮ ಸಂಸ್ಥೆಯ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಉತ್ತರ ವಲಯ ಪೊಲೀಸ್ ಮಹಾ ನಿರೀಕ್ಷಕ ಭಾಸ್ಕರ್ ರಾವ್

ಬೆಳಗಾವಿ: ಬೆಳಗಾವಿ ವಾಣಿಜ್ಯೋದ್ಯಮ ಸಂಸ್ಥೆ (ಬಿಸಿಸಿಐ)ಯ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭ ಶನಿವಾರ ಸಂಜೆ ಉದ್ಯಮಬಾಗದ ರಾವ ಸಾಹೇಬ ಗೋಗಟೆ ಸಭಾಂಗಣದಲ್ಲಿ ನಡೆಯಿತು.

ಕೈಗಾರಿಕೋದ್ಯಮದಲ್ಲಿ ವಿಶೇಷ ಸಾಧನೆ ಮಾಡಿದವರಿಗೆ ಪ್ರೋತ್ಸಾಹ ನೀಡುವ ಉದ್ದೇಶದ ದಿಲೀಪ ದಾಮಣೆ ಪ್ರಶಸ್ತಿಯನ್ನು ಕ್ರಿಯೆಂಟರ್ಸ್ ಟೆಕ್‌ಪೂಲ್ ಸಂಸ್ಥೆಗೆ, ಬಾಳಪ್ಪ ಕಗ್ಗಣಗಿ ಸ್ಮರಣಾರ್ಥ ಬೆಸ್ಟ್ ಟ್ರೇಡರ್ ಪ್ರಶಸ್ತಿಯನ್ನು ಹಜಾರೆ ಕಿಚನ್‌ವೇರ್ ಮತ್ತು ಎಂ.ವಿ. ಹೇರವಾಡಕರ ಸ್ಮರಣಾರ್ಥ ಪ್ರಶಸ್ತಿಯನ್ನು ಎಂ.ಎಸ್. ವೆಂಕಟಾಚಲಯ್ಯ ಯಾರ್ನ್ಸ್ ಸಂಸ್ಥೆಗೆ ನೀಡಲಾಯಿತು.




ಪ್ರಶಸ್ತಿ ಪಡೆದ ಉದ್ಯಮಿಗಳ ಜತೆಗೆ ಅತಿಥಿಗಳು ಮತ್ತು ಬಿಸಿಸಿಐ ಪದಾಧಿಕಾರಿಗಳು.

ಉತ್ತರ ವಲಯ ಪೊಲೀಸ್ ಮಹಾ ನಿರೀಕ್ಷಕ ಭಾಸ್ಕರ್ ರಾವ್ ಮಾತನಾಡಿ, ಬೆಂಗಳೂರು ಬಿಟ್ಟರೆ ಬೆಳಗಾವಿ ಕೈಗಾರಿಕೆಗಳ ಹಬ್ ಆಗಿ ನಿರ್ಮಾಣ ಗೊಳ್ಳುತ್ತಿದೆ. ಮತ್ತಷ್ಟು ಹೊಸ ಉದ್ಯಮಗಳನ್ನು ಬೆಳಗಾವಿಗೆ ಕರೆತರುವ ಕೆಲಸ ಆಗಬೇಕು. ಇಷ್ಟರಲ್ಲಿಯೇ ಬೆಳಗಾವಿಯಲ್ಲಿ ಕಮಿಷನರೇಟ್ ಸ್ಥಾಪನೆಗೊಳ್ಳಲಿದ್ದು, ಕೈಗಾರಿಕೆಗಳಿಗೆ ಬೇಕಾದ ಎಲ್ಲ ಸಹಕಾರವನ್ನು ಪೊಲೀಸ್ ಇಲಾಖೆ ನೀಡಲಿದೆ ಎಂದರು.

### ಸ್ಥಳೀಯರು ಮುಂದೆ ಬರಲಿ

ಸಂಸದ ಸುರೇಶ ಅಂಗಡಿ ಮಾತನಾಡಿ, ಬೆಳಗಾವಿಯಲ್ಲಿ ಕೈಗಾರಿಕೆಗೆ ಬೇಕಾದ ಎಲ್ಲ ಸಂಪನ್ಮೂಲಗಳು ಯಥೇಚ್ಛವಾಗಿವೆ. ಹೊರಗಿನ ಜನ ಬಂದು ಸಂಪನ್ಮೂಲಗಳ ಪ್ರಯೋಜನ ಪಡೆದುಕೊಳ್ಳುವ ಬದಲು ಸ್ಥಳೀಯರು ಮುಂದೆ ಬರಬೇಕು ಎಂದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ.ಎಚ್. ಮಹೇಶಪ್ಪ ಮಾತನಾಡಿ, ಶಿಕ್ಷಣ ಮತ್ತು ಕೈಗಾರಿಕೆ ವಲಯಗಳ ನಡುವೆ ದೊಡ್ಡ ಕಂದಕ ನಿರ್ಮಾಣವಾಗಿದ್ದು, ಇದನ್ನು ಅಳಿಸಿ ಹಾಕುವ ನಿಟ್ಟಿನಲ್ಲಿ ವಾಣಿಜ್ಯೋದ್ಯಮ ಸಂಸ್ಥೆ ವಿಶ್ವವಿದ್ಯಾಲಯಗಳೊಂದಿಗೆ ಚರ್ಚೆ ನಡೆಸಬೇಕು. ವಾಣಿಜ್ಯೋದ್ಯಮ ಕುರಿತು ವಿದ್ಯಾರ್ಥಿಗಳಿಗೆ ಕಾರ್ಯಾಗಾರ ಏರ್ಪಡಿಸಿ ಯುವ ಉದ್ಯಮಿಗಳನ್ನು ಹುಟ್ಟು ಹಾಕಬೇಕು ಎಂದು ಅಭಿಪ್ರಾಯಪಟ್ಟರು. ಕ್ರಿಯೆಂಟರ್ಸ್ ಟೆಕ್‌ಪೂಲ್ ಸಂಸ್ಥೆ ಪರವಾಗಿ ನಿಲೇಶ ಚೌಗಲೆ ಮತ್ತು ಪ್ರಕಾಶ ಮುಗಳಿ, ಹಜಾರೆ ಕಿಚನ್‌ವೇರ್ ಪರವಾಗಿ ಅನಿಲ ಹಜಾರೆ ಮತ್ತು ಎಂ.ಎಸ್. ವೆಂಕಟಾಚಲಯ್ಯ ಯಾರ್ನ್ಸ್ ಸಂಸ್ಥೆ ಪರವಾಗಿ ರಾಜಾಶ್ಯಾಮ ಜಾಜು ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾಸಿಯಾ ಅಧ್ಯಕ್ಷ ಚಿದಾನಂದ ರಾಜಮಾನೆ, ಕಾರ್ಯದರ್ಶಿ ಗೋಪಿನಾಥ, ಬಿಸಿಸಿಐ ಅಧ್ಯಕ್ಷ ರಾಜೇಂದ್ರ ಹರಕುಣಿ, ಗೌರವ ಕಾರ್ಯದರ್ಶಿ ವೆಂಕಟೇಶ ಸರ್ನೋಬತ್ ಇದ್ದರು.